ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

41ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಬಾಲಿವುಡ್ ಹಿರಿಯ ನಟ ಶಶಿ ಕಪೂರ್ ನಿಧನ

ಅನಾರೋಗ್ಯದಿಂದ ಬಳಲುತ್ತಿದ್ದ ಬಾಲಿವುಡ್ ಹಿರಿಯ ನಟ ಶಶಿ ಕಪೂರ್ ವಿಧಿವಶರಾಗಿದ್ದಾರೆ. 79 ವರ್ಷದ ಶಶಿ ಕಪೂರ್ ಅವರು ಕಳೆದ ಏಳು ತಿಂಗಳಿನಿಂದ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು, ಸೋಮವಾರ ಸಂಜೆ ಮುಂಬೈನ ಕೋಕಿಲಾಬೆನ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಶಶಿ ಕಪೂರ್ ಅವರು ಮಕ್ಕಳಾದ ಕುನಾಲ್ ಕಪೂರ್, ಸಂಜನಾ ಕಪೂರ್ ಮತ್ತು ಕರಣ್ ಕಪೂರ್ ಅವರುಗಳನ್ನು ಅಗಲಿದ್ದಾರೆ. ಶಶಿ ಕಪೂರ್ ಅವರಿಗೆ ಕೇಂದ್ರ ಸರ್ಕಾರ 2015ರಲ್ಲಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡಿ ಗೌರವಿಸಿತ್ತು.

ಬಸವ ಪುರಸ್ಕಾರ ರಾಷ್ಟ್ರೀಯ ಪ್ರಶಸ್ತಿಗೆ ಪಾಟೀಲ ಪುಟ್ಟಪ್ಪ ಆಯ್ಕೆ

ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಅವರನ್ನು ಬಸವ ಪುರಸ್ಕಾರ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಉಮಾಶ್ರೀ ತಿಳಿಸಿದ್ದಾರೆ. ನ್ಯಾಯಮೂರ್ತಿ ವಿ.ಪಾಟೀಲ್ ನೇತೃತ್ವದ ಆಯ್ಕೆ ಸಮಿತಿ ಪಾಟೀಲ ಪುಟ್ಟಪ್ಪ ಅವರನ್ನು ಆಯ್ಕೆ ಮಾಡಿದ್ದು , ಪ್ರಶಸ್ತಿ ಪ್ರದಾನ ದಿನಾಂಕವನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಮರಳು ಕಲಾವಿದ ಸುದರ್ಶನ್ ಪಟ್ನಾಯಕ್ ಮೇಲೆ ಹಲ್ಲೆ

ಇಂಟರ್‌ನ್ಯಾಷನಲ್ ಸ್ಯಾಂಡ್ ಆರ್ಟ್ ಫೆಸ್ಟಿವಲ್‌ಗಾಗಿ ಒಡಿಶಾಕ್ಕೆ ಆಗಮಿಸಿದ್ದ ಖ್ಯಾತ ಮರಳು ಕಲಾವಿದ ಸುದರ್ಶನ್ ಪಟ್ನಾಯಕ್ ಮೇಲೆ ಅಪರಿಚಿತ ಯುವಕನೊಬ್ಬ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ. ಕೈ ಕುಲುಕುವಂತೆ ನಟಿಸಿದ ಆ ಯುವಕ, ಪಟ್ನಾಯಕ್ ಅವರ ವಾಚ್ ಕಿತ್ತುಕೊಳ್ಳಲು ಯತ್ನಿಸಿ ಅವರ ಕೈಗಳನ್ನು ತಿರುಚಿದ್ದಾನೆ. ಪಟ್ನಾಯಕ್ ಇದಕ್ಕೆ ಪ್ರತಿರೋಧಿಸಿದಕ್ಕೆ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :29 ಮಂಗಳವಾರ ಡಿ.5, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಪ್ರಜಾಕಾರಣ : ಉಪೇಂದ್ರ ಹೇಳುವುದೇನು?

ಹಾಸನ : ಚಿತ್ರನಟ ಹಾಗೂ ಕೆ.ಪಿ.ಜೆ.ಪಿ. ಪಕ್ಷದ ಸ್ಥಾಪಕ ಉಪೇಂದ್ರ ನಗರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಸೋಮವಾರ ಮಾತನಾಡಿದರು. ಅವರು ಪತ್ರಿಕಾಗೋಷ್ಠಿಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಹೀಗಿವೆ.

■ ನನ್ನದು ಎಡವೂ ಅಲ್ಲ-ಬಲವೂ ಅಲ್ಲ ಮಧ್ಯಮ ಮಾರ್ಗ.

■ ಬುದ್ಧ ದೇವರಿಲ್ಲ ಎಂದ-ಅವನನ್ನೇ ದೇವರು ಮಾಡಿ ಪೂಜೆ ಮಾಡಿದರು.

■ ನಕಾರಾತ್ಮಕ ವಿಚಾರ ಮಾಡುವುದು ಬೇಡ. ಹಿಂದೆ ಆಗಿದ್ದು ಆಗಿ ಹೋಗಿದೆ. ಮುಂದೇನು ಆಗಬೇಕೆಂದು ಸಕಾರಾತ್ಮಕವಾಗಿ ಯೋಚಿಸೋಣ.

■ ಪ್ರನಾಳಿಕೆ ತಯಾರಾಗುತ್ತಿದೆ-ರಾಜ್ಯಾದ್ಯಂತ ಪ್ರವಾಸ ಮಾಡಿ ಎಲ್ಲರ ಅಭಿಪ್ರಾಯ ಕ್ರೋಢೀಕರಿಸಿ ಸಿದ್ಧ ಮಾಡುತ್ತೇನೆ.

■ ರಾಜ್ಯ ಮಟ್ಟ , ಕೇಂದ್ರ ಮಟ್ಟಕ್ಕಿಂತ ಗ್ರಾಮ ಮಟ್ಟದಲ್ಲಿ ಯೋಜನೆಗಳ ಅನುಷ್ಠಾನ ಬಹಳ ಮುಖ್ಯ ಅಂದುಕೊಂಡಿದ್ದೇನೆ.

■ ಶಿಕ್ಷಣ ಮತ್ತು ಆರೋಗ್ಯ ಸೇವೆ ಉಚಿತವಾಗಿ ಸಿಗುವ ವ್ಯವಸ್ಥೆ ಆದರೆ ಜನರ ಅರ್ಧ ಸಮಸ್ಯೆಗಳು ಪರಿಹಾರ ಆಗುತ್ತವೆ.

■ ರಾಜಕೀಯ ವ್ಯವಸ್ಥೆ ವ್ಯಾಪಾರ ಆಗಿರುವುದರಿಂದ ಶಿಕ್ಷಣ, ಆರೋಗ್ಯ ಕ್ಷೇತ್ರ ಹೀಗೆ ಎಲ್ಲವೂ ವ್ಯಾಪಾರೀಕರಣ ಆಗಿದೆ.

■ ನಾನು ಗೆಲುವು-ಸೋಲಿನ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಗುರಿ ತಲುಪಲು ದಾರಿ ಮುಖ್ಯ. ಸರಿಯಾದ ದಾರಿಯಲ್ಲಿ ಹೆಜ್ಜೆ ಇಡುವುದೇ ಮುಖ್ಯ.

■ ಅನುಪಮ ಶೆಣೈ ಅವರು ಒಮ್ಮೆ ಭೇಟಿ ಆಗಿದ್ದರು. ನಾನು ಅವರನ್ನೇನೂ ಕರೆದಿರಲಿಲ್ಲ. ಅವರು ಮಾತ್ರ ಅಲ್ಲ, ಯಾರು ಬೇಕಾದರೂ ನನ್ನ ಜೊತೆ ಸೇರಬಹುದು.

■ ನಮ್ಮದು ಪ್ರಜಾಕೀಯ. ಪ್ರಜೆಗಳೇ ಮುಖ್ಯ. ಪ್ರಜೆಗಳೇ ಆದರ್ಶ.

■ ಸಿನಿಮಾ ಕ್ಷೇತ್ರದಲ್ಲಿ ನಾನು ಏನೇ ಮಾಡಿರಬಹುದು. ಆದರೆ ರಿಯಲ್ ಲೈಫ್‌ನಲ್ಲಿ ನಾನೇನೂ ಅಲ್ಲ.

■ ನಾನು ನನ್ನ ಜೀವನದಲ್ಲಿ ಲಂಚ ಕೊಡುವ ವ್ಯವಹಾರವನ್ನೇ ಮಾಡಿಲ್ಲ. ಸಿನಿಮಾ ಕ್ಷೇತ್ರದಲ್ಲಿ ಲಂಚ ಕೊಡುವ ಸಂದರ್ಭವೇ ಬರುವುದಿಲ್ಲ.

■ ಸಿನಿಮಾ ಕ್ಷೇತ್ರದಲ್ಲಿ ಜಾತಿ-ಗೀತಿ ವರ್ಕೌಟ್ ಆಗುವುದಿಲ್ಲ. ಅಲ್ಲಿ ಅರ್ಹತೆ ಇದ್ದರೆ ಮಾತ್ರ ಯಶಸ್ಸು ಸಿಗುತ್ತದೆ. ರಾಜಕಾರಣಿಗಳು ಜಾತಿವಾದ ಹೆಚ್ಚುವಂತೆ ಮಾಡಿದ್ದಾರೆ. ಸಾಮಾನ್ಯ ಜನರಿಗೆ ಈ ಜಾತಿ ಬೇಕಿಲ್ಲ.

■ ನಾನು ಮೂರ್ಖರನ್ನು ಬದಲಾವಣೆ ಮಾಡಲು ಬಂದಿಲ್ಲ. ಪ್ರಜ್ಞಾವಂತರನ್ನು ಎಚ್ಚರಿಸಲು ಬಂದಿರುವೆ.

■ ಆರೋಗ್ಯ ಕ್ಷೇತ್ರ ಸುಧಾರಣೆ ಮಾಡಲು ಸಚಿವ ರಮೇಶ್ ಕುಮಾರ್ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಇನ್ನೂ ಏನು ಸುಧಾರಣೆ ಆಗಬೇಕಿದೆ ಎಂದು ನಾವೆಲ್ಲ ಸೇರಿ ಚಿಂತಿಸೋಣ.

■ ಒಳ್ಳೆಯ ಕೆಲಸ ಮಾಡಲು ಸ್ಪರ್ಧೆ ಏಕೆ ಬೇಕು? ಸಮಾಜಕ್ಕೆ ಒಳ್ಳೆಯದಾಗುವುದಿದ್ದರೆ ಯಾರು ಬೇಕಾದರೂ ಮಾಡಬಹುದು ; ಯಾವ ಪಕ್ಷದವರೂ ಮಾಡಬಹುದು. ಅದನ್ನು ಉಪೇಂದ್ರನೇ ಮಾಡಬೇಕೆಂದೇನೂ ಇಲ್ಲ.

■ ನಾನು ಒಬ್ಬನೇ ಇದ್ದೇನೆ ಅನ್ನಿಸುವುದಿಲ್ಲ. ರಾವಣ ಚಿನ್ನದ ಕೋಟೆಯನ್ನೇ ಕಟ್ಟಿಕೊಂಡಿದ್ದ. ರಾಮನ ಜೊತೆ ಇದ್ದದ್ದು ಲಕ್ಷ್ಮಣ ಮಾತ್ರ. ವಾನರ ಸೇನೆ ಕಟ್ಟಿಕೊಂಡು ಯುದ್ಧ ಗೆಲ್ಲಲಿಲ್ಲವೇ? ಪುರಾಣದಲ್ಲಿ, ಚರಿತ್ರೆಯಲ್ಲಿ ಇಂತಹ ಬೇಕಾದಷ್ಟು ಉದಾಹರಣೆ ಸಿಗುತ್ತವೆ. ನಮ್ಮಲ್ಲಿ ಸತ್ಯ ಇದ್ದರೆ ಅದೇ ದಾರಿ ತೋರಿಸುತ್ತಾ ಹೋಗುತ್ತದೆ.

■ ರಾಜಕಾರಣ ಎಂದರೆ ಎಲ್ಲರೂ ಭಯಪಡುತ್ತಿದ್ದಾರೆ. ಅದು ಜನಸಾಮಾನ್ಯರಿಂದ ಆಗದ ಕೆಲಸ ಅಂದುಕೊಂಡಿದ್ದಾರೆ.

■ ನನ್ನದು ಮಿಷನ್ 2030. 18 ರಿಂದ 30ರ ತನಕ ನಡೆಯುತ್ತದೆ.

■ ಈಗ ಕಬ್ಬಿಣ ಕಾದಿದೆ. ಕಬ್ಬಿಣ ಬಗ್ಗಿಸಲು ಈಗಲೇ ಹೊಡೆಯಬೇಕು. ಚುನಾವಣಾ ಸಮಯವೇ ರಾಜಕಾರಣಕ್ಕೆ ಪ್ರಶಸ್ತವಾದ ಕಾಲ ಅಂದುಕೊಂಡಿದ್ದೇನೆ. ನಾನೇ ಅಭ್ಯರ್ಥಿಯಾಗಿ ನಿಲ್ಲಬೇಕೆಂದೇನೂ ಇಲ್ಲ. ಉತ್ತಮ ಅಭ್ಯರ್ಥಿಗಳನ್ನು ನಿಲ್ಲಿಸಬೇಕೆಂಬುದು ನನ್ನ ಆಲೋಚನೆ. ನನಗಿಂತ ಉತ್ತಮ ಅಭ್ಯರ್ಥಿ ಸಿಕ್ಕರೆ ಅವರಿಗೆ ಅವಕಾಶ ಮಾಡಿಕೊಡುತ್ತೇನೆ.

(-4ನೇ ಪುಟಕ್ಕೆ)

'ತಾತ್ಕಾಲಿಕ ಉಪನಗರ ಕಾಮಗಾರಿ ಪೂರ್ಣಗೊಳಿಸಿ '

ಶ್ರವಣಬೆಳಗೊಳ ಜೈನ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಒತ್ತಾಯ

ಹಾಸನ : ಮಹಾಮಸ್ತಕಾಭಿಷೇಕ ಮಹೋತ್ಸವ ಆಹಾರ ವ್ಯವಸ್ಥೆಗೆ ಆಹಾರ ಉಪ ಸಮಿತಿ ವತಿಯಿಂದ ಎಲ್ಲಾ ರೀತಿಯ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸೂಚಿಸಿದರು.

ಗೊಮ್ಮಟನಗರದ ಮಹಾ ಮಸ್ತಕಾಭಿಷೇಕ ಮಹೋತ್ಸವ-2018ರ ರಾಷ್ಟ್ರೀಯ ಸಮಿತಿ ಅಧ್ಯಕ್ಷರ ಕಚೇರಿಯಲ್ಲಿ ವಿವಿಧ ಉಪಸಮಿತಿಗಳ ಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, ಉದ್ದೇಶಿತ ವಿವಿಧ ಉಪನಗರಗಳ ನೀಲನಕ್ಷೆಯನ್ನು ವೀಕ್ಷಿಸಿ ನಿಗದಿತ ಸಮಯದಲ್ಲಿ ಉಳಿದ ತಾತ್ಕಾಲಿಕ ಉಪ ನಗರಗಳ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ತಿಳಿಸಿದರು.

ನಂತರ ನಿರ್ಮಾಣವಾಗುತ್ತಿರುವ ತಾತ್ಕಾಲಿಕ ಉಪನಗರಗಳಿಗೆ ಆಚಾರ್ಯಶ್ರೀ ವರ್ಧಮಾನ ಸಾಗರ್ ಮಹಾರಾಜರು ಹಾಗೂ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ವಿವಿಧ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದರು.

ಈ ವೇಳೆ ಮಹಾಮಸ್ತಕಾಭಿಷೇಕ ಮಹೋತ್ಸವ ವಿಶೇಷಾಧಿಕಾರಿ ಬಿ.ಎನ್. ವರಪ್ರಸಾದ ರೆಡ್ಡಿ ಮಾತನಾಡಿ, ಡಿಸೆಂಬರ್ 15ರೊಳಗೆ ತ್ಯಾಗಿನಗರ ಕಾಮಗಾರಿ ಪೂರ್ಣಗೊಳಿಸಿ ಮಠದ ಸುಪರ್ದಿಗೆ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಆಹಾರ ಉಪ ಸಮಿತಿ ಅಧ್ಯಕ್ಷ ವಿನೋದ್ ಬಾಕ್ಲಿವಾಲ್, ಸಂಯೋಜಕ ವಜ್ರಕುಮಾರ್, ಪಂಚ ಕಲ್ಯಾಣ ಉಪಸಮಿತಿ ಮುಖ್ಯ ಸಂಯೋಜಕ ಪ್ರಕಾಶ್ ಸೇರಿದಂತೆ ಇನ್ನೂ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

ಕೆರೆಗಳ ಪುನಶ್ಚೇತನಕ್ಕೆ ಒತ್ತಾಯಿಸಿ ಹಿರಿಯ ನಾಗರಿಕರ ವೇದಿಕೆ ಮನವಿ

ಹಾಸನ : ಕೆರೆಗಳ ಪುನಶ್ಚೇತನಕ್ಕೆ, ಚನ್ನಪಟ್ಟಣ ಕೆರೆ , ಸತ್ಯಮಂಗಲ ಕೆರೆ ಅಭಿವೃದ್ಧಿ ಹೆಸರಿನಲ್ಲಿ ಮಾಡಿರುವ ಖರ್ಚು-ವೆಚ್ಚದ ವಿವರ ನೀಡುವಂತೆ ಒತ್ತಾಯಿಸಿ ಜಿಲ್ಲಾ ಹಿರಿಯ ನಾಗರಿಕರ ವೇದಿಕೆ ಸೋಮವಾರ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿತು.

ಜನ-ಜಾನುವಾರುಗಳು ಹಾಗೂ ಪಕ್ಷಿಯಿಂದ ಹಿಡಿದು ಸಕಲ ಜೀವಿಗಳಿಗೆ ಕುಡಿಯುವ ನೀರಿನ ಅಗತ್ಯ ಪೂರೈಸಲು, ಗಿಡ-ಮರಗಳು ಹಾಗೂ ರೈತರ ಬೆಳೆಗಳ ಪೋಷಣೆಗೆ ಅಗತ್ಯವಾದ ನೀರನ್ನು ಒದಗಿಸಲು, ಅಂತರ್ಜಲ ವೃದ್ಧಿ , ಪರಿಸರದ ಸಮತೋಲನ ಕಾಪಾಡಲು ಕೆರೆಗಳು ಮುಖ್ಯವಾಗುತ್ತವೆ. ಆದರೆ ಕೆರೆ ಅಭಿವೃದ್ಧಿ ಹೆಸರಿನಲ್ಲಿ ಕೆರೆಗಳನ್ನು ಒಡೆದು ಬಡಾವಣೆಗಳನ್ನಾಗಿ ಮಾಡಲಾಗುತ್ತಿದೆ. ಚನ್ನಪಟ್ಟಣ ಕೆರೆ ಹೊಡೆದು ಬಸ್ ನಿಲ್ದಾಣವನ್ನು ಕಟ್ಟಲಾಗಿದೆ ಎಂದು ದೂರಿದರು.

ಬಡವರ ಊಟಿಯೆಂದೇ ಹೆಸರಾಗಿದ್ದ ನಗರದ ಬೀರನಹಳ್ಳಿ ಕೆರೆಯನ್ನು ಒಡೆದು ಕುವೆಂಪು ನಗರ ಕಟ್ಟಲಾಗಿದೆ. ಇತಿಹಾಸ ಪ್ರಸಿದ್ಧ ಹುಣಸಿನಕೆರೆಗೆ ನಗರದ ಕೊಳಚೆಯನ್ನೆಲ್ಲಾ ತುಂಬಲಾಗುತ್ತಿದೆ. ಅದರ ದುಷ್ಪರಿಣಾಮವನ್ನು ನಾವು ಇಂದು ಕಾಣುತ್ತಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಕೆರೆ-ಕಟ್ಟೆ , ಕಲ್ಯಾಣಿಗಳನ್ನು ಸಂರಕ್ಷಿಸಬೇಕು. ಒತ್ತುವರಿಯನ್ನು ಕೂಡಲೇ ತೆರವುಗೊಳಿಸಬೇಕು ಹಾಗೂ ಕೆರೆಗಳಿಗೆ ನೀರು ಹರಿದು ಬರುವ ಮಾರ್ಗಗಳನ್ನು ಸರಿಪಡಿಸಬೇಕು ಎಂದು ಕಳೆದ 8 ತಿಂಗಳಿನಿಂದ ಜಿಲ್ಲಾ ಹಿರಿಯ ನಾಗರಿಕರ ವೇದಿಕೆಯಿಂದ ಒತ್ತಾಯಿಸುತ್ತ ಬಂದಿದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಚನ್ನಪಟ್ಟಣದಲ್ಲಿ ಒಟ್ಟು 159 ಎಕರೆ ಕೆರೆಯ ಜಾಗವಿದೆ. ಈ ಪ್ರದೇಶದಲ್ಲಿ ಬಸ್ ನಿಲ್ದಾಣ ಹಾಗೂ ಇತರೆ ಉದ್ದೇಶಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. 90 ಎಕರೆ ಬಿಟ್ಟು ಉಳಿದ 69 ಎಕರೆ ಪ್ರದೇಶವನ್ನು ಅನ್ಯ ಉದ್ದೇಶಗಳಿಗೆ ಬಳಸದೆ ಕೆರೆಯನ್ನು ಮತ್ತೆ ಪುನಶ್ಚೇತನಗೊಳಿಸಬೇಕು ಮತ್ತು ಹುಣಸಿನಕೆರೆಗೆ ಬರುತ್ತಿರುವ ಕೊಳಚೆ ನೀರನ್ನು ತಪ್ಪಿಸಿ ಮಳೆ ನೀರು ಮಾತ್ರ ಹರಿದು ಬರುವ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು.

(-4ನೇ ಪುಟಕ್ಕೆ)

ಪಾರ್ಕ್ ನಿರ್ಮಾಣದ ಗುದ್ದಲಿ ಪೂಜೆ ವೇಳೆ ವಾಗ್ವಾದ

ಹಾಸನ : ಪಾರ್ಕ್ ನಿರ್ಮಾಣಕ್ಕೆ ಶಾಸಕ ಹೆಚ್.ಎಸ್.ಪ್ರಕಾಶ್ ಅವರು ಸೋಮವಾರ ಗುದ್ದಲಿ ಪೂಜೆ ನೆರವೇರಿಸುವ ವೇಳೆ ಜಾಗದ ವಿಚಾರದಲ್ಲಿ ವಾಗ್ವಾದ ನಡೆಯಿತು.

ಹೇಮಾವತಿ ನಗರದ 3ನೇ ಮುಖ್ಯ ರಸ್ತೆ ಹಾಗೂ 8ನೇ ಅಡ್ಡ ರಸ್ತೆ ಬಳಿ ಇರುವ ಖಾಲಿ ಜಾಗದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಉದ್ಯಾನವನ ನಿರ್ಮಿಸುತ್ತಿದ್ದು , ಸೋಮವಾರ ಶಾಸಕರು ಗುದ್ದಲಿ ಪೂಜೆ ನೆರವೇರಿಸುವ ಸಂದರ್ಭ ಸ್ಥಳದಲ್ಲಿದ್ದ ಕಾಂಗ್ರೆಸ್ ಮುಖಂಡರಾದ ವಿನಯ್ ಗಾಂಧಿ ಹಾಗೂ ತಮಲಾಪುರ ಕೃಷ್ಣೇಗೌಡ ವಾಗ್ವಾದ ನಡೆಸಿದರು.

ಈ ಜಾಗವು 1996ರಲ್ಲೇ ನಮ್ಮ ಹೆಸರಿಗೆ ಖಾತೆ ಆಗಿದೆ. ಆದರೆ ಇದು ಪಾರ್ಕ್‌ಗೆ ಸೇರಿದ ಜಾಗ ಎಂದು ಹೇಳಲಾಗುತ್ತಿದೆ ಎಂದು ವಿನಯ್ ಗಾಂಧಿ ದೂರಿದರು.

ವಾಗ್ವಾದ ಮತ್ತು ವಿರೋಧದ ನಡುವೆಯೂ ಶಾಸಕ ಹೆಚ್.ಎಸ್. ಪ್ರಕಾಶ್ ಹಾಗೂ ನಗರಸಭೆ ಅಧ್ಯಕ್ಷ ಹೆಚ್.ಎಸ್.ಅನಿಲ್‌ಕುಮಾರ್ ಕಾಮಗಾರಿಯ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಶಾಸಕ ಹೆಚ್.ಎಸ್. ಪ್ರಕಾಶ್ ಅವರು, ಜಿ.ಪುಟ್ಟಸ್ವಾಮಿ ಗೌಡರು ಸಚಿವರಾಗಿದ್ದಾಗ ಪಾರ್ಕ್ ಉದ್ದೇಶಕ್ಕೆ ನಿವೇಶನ ಕೊಡಲಾಗಿದೆ. ಇದು ಪಾರ್ಕಿಗೆ ಮೀಸಲಾಗಿಲ್ಲ ಎಂದರೆ ಜಾಗ ಬಿಟ್ಟು ಕೊಡುತ್ತೇವೆ. ಮುಖ್ಯಮಂತ್ರಿಗಳಿಂದ ಮಾಹಿತಿ ಪಡೆದು ನೀವೇ ಕಟ್ಟಡ ಕಟ್ಟಿಕೊಳ್ಳಿ ಎಂದರು.

ಈ ಜಾಗ ಪಾರ್ಕಿಗೆ ಮೀಸಲಿಟ್ಟಿರುವ ಸ್ಥಳ. ಆದರೆ ಈ ಜಾಗ ತಮಗೆ ಸೇರಿದ್ದು ಎಂದು ವಿನಯ್ ಗಾಂಧಿ ಹಾಗೂ ತಮಲಾಪುರ ಕೃಷ್ಣೇಗೌಡ ಹೇಳಿದ್ದಾರೆ. ಹೇಮಾವತಿ ನಗರದಲ್ಲಿ ಇಂತಹ ಮೂರು ಪಾರ್ಕ್‌ಗಳು ಇದ್ದು , ಅದನ್ನು ನಗರಸಭೆ ವಶಕ್ಕೆ ಪಡೆಯಲಾಗಿದೆ ಎಂದರು.

ಇದೇ ಜಾಗದಲ್ಲಿ ವಿನಯ್ ಗಾಂಧಿ ಸಹೋದರರು ಕೆಲ ಜಾಗವನ್ನು ಮಾರಾಟ ಮಾಡಿದ್ದಾರೆ. ಇಲ್ಲಿ ಯಾವ ರಾಜಕೀಯ ಮಾಡುತ್ತಿಲ್ಲ. ಹಾಗೆಯೇ ಇವರ ವಿರುದ್ಧ ನನಗೆ ಯಾವ ಸೇಡು ಕೂಡ ಇಲ್ಲ ಎಂದರು.

ಹುಡಾ ಆಯುಕ್ತ ರಮೇಶ್, ಜಿಲ್ಲಾ ಪಂಚಾಯತ್ ಸದಸ್ಯ ಸ್ವರೂಪ್, ಮಂಜುನಾಥ್, ನಗರಸಭೆ ಸದಸ್ಯ ಪ್ರಸನ್ನ ಕುಮಾರ್, ಸಂಗಂ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಸರ್ಕಾರಿ ಬಸ್ ಹರಿದು ಅಪರಿಚಿತನ ಸಾವು

ಹಾಸನ : ನಗರದಲ್ಲಿ ಸೋಮವಾರ ಬೆಳಿಗ್ಗೆ 7.30ರಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ಸೊಂದು ಪಾದಚಾರಿ ಮೇಲೆ ಹರಿದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿರುವ ದುರ್ಘಟನೆ ನಡೆದಿದೆ.

ಖಾಕಿ ಷರ್ಟ್ ಮತ್ತು ನೈಟ್ ಪ್ಯಾಂಟ್ ಧರಿಸಿದ್ದ, ಸುಮಾರು 35ರಿಂದ 40 ವರ್ಷ ವಯಸ್ಸಿನ ವ್ಯಕ್ತಿ ಬಸ್ ಅಪಘಾತದಲ್ಲಿ ಮೃತಪಟ್ಟಿದ್ದಾನೆ. ಅಪರಿಚಿತ ಶವ ಇದಾಗಿದ್ದು , ನಗರದ ಸರ್ಕಾರಿ ಆಸ್ಪತ್ರೆಯಲ್ಲಿಡಲಾಗಿದೆ.

ಅಪಘಾತಕ್ಕೆ ಕಾರಣವಾಗಿರುವ ಕೆ.ಎ.13-ಎಫ್.2183 ನಂಬರಿನ ಬಸ್ ಬೆಳಿಗ್ಗೆ ಹೊಸ ಬಸ್ ನಿಲ್ದಾಣ ಸಮೀಪದ ರೈಲ್ವೆ ಗೇಟ್ ಬಳಿ ವ್ಯಕ್ತಿಯ ಮೇಲೆ ಹರಿದು ಸಾವುಂಟು ಮಾಡಿದೆ.

ಈ ಬಗ್ಗೆ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕೆರೆಗಳಿಗೆ ಕಾಯಕಲ್ಪ : ನಿಯೋಗಕ್ಕೆ ಡಿ.ಸಿ. ಭರವಸೆ

ಹಾಸನ : ನಗರ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಕಾಯಕಲ್ಪ ನೀಡಲು ನಿರ್ಧರಿಸಲಾಗಿದೆ. ಈ ಸಂಬಂಧ ವಿವರವಾದ ವರದಿ ಸಲ್ಲಿಸಲು ಇಂಜಿನಿಯರಿಂಗ್ ಕಾಲೇಜಿಗೆ ಪತ್ರ ಬರೆಯಲಾಗಿದೆ ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ತಿಳಿಸಿದರು. ಸೋಮವಾರ ಸಂಜೆ ಹಿರಿಯ ನಾಗರಿಕರ ವೇದಿಕೆ ನಿಯೋಗ ಭೇಟಿಯಾದ ವೇಳೆ ಮಾಹಿತಿ ನೀಡಿದ ಅವರು, ಕೆರೆಗಳ ಕಾಯಕಲ್ಪ ಸುಲಭದ ವಿಚಾರವಲ್ಲ, ನೀರಿನ ಹರಿವು, ಲಭ್ಯತೆ ಬಗ್ಗೆಯೂ ಮಾಹಿತಿ ಪಡೆಯಬೇಕು ಎಂದರು.

ಇದಕ್ಕೆ ಸಾಕಷ್ಟು ಹಣ ವೆಚ್ಚವಾಗುತ್ತದೆ. ಚನ್ನಪಟ್ಟಣ ಕೆರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರೋವರ ಪ್ರಾಧಿಕಾರಕ್ಕೂ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಣವನ್ನು ಹೇಗೆ ತರಬೇಕೆಂಬ ಆಲೋಚನೆ ಇದೆ. ನಾನು ಇಲ್ಲಿಂದ ಹೋಗುವುದರೊಳಗೆ ಕೆರೆಗಳಿಗೆ ಕಾಯಕಲ್ಪ ಮಾಡುತ್ತೇನೆ. ಚನ್ನಪಟ್ಟಣ ಕೆರೆ ಅಭಿವೃದ್ಧಿ ಕುರಿತ ಮಾಹಿತಿಯನ್ನು ಎ.ಸಿ. ಬಳಿ ಪಡೆದುಕೊಳ್ಳುವಂತೆ ಅವರು ನಿಯೋಗಕ್ಕೆ ತಿಳಿಸಿದರು.

ವ್ಯಕ್ತಿಯ ಬರ್ಬರ ಹತ್ಯೆ : ಪೊಲೀಸರಿಂದ ಪರಿಶೀಲನೆ

ಚನ್ನರಾಯಪಟ್ಟಣ : ತಾಲ್ಲೂಕಿನ ಅರಳಾಪುರ ಗೇಟ್ ಬಳಿ ಭಾನುವಾರ ರಾತ್ರಿ ವ್ಯಕ್ತಿಯೋರ್ವನನ್ನು ವಿಚಿತ್ರವಾಗಿ ಕೊಲೆ ಮಾಡಲಾಗಿದೆ. ಪೊಲೀಸರು ಸ್ಥಳಕ್ಕಾಗಮಿಸಿ ಶವವನ್ನು ಪರಿಶೀಲಿಸಿದಾಗ, ಈತ ಪಕ್ಕದ ಶೆಟ್ಟಿಹಳ್ಳಿ ಗ್ರಾಮದ ತೋಟದ ಮನೆ ನಿವಾಸಿ ಪುಟ್ಟಸ್ವಾಮಿ (45) ಎಂದು ತಿಳಿದು ಬಂದಿದೆ.

ಶೆಟ್ಟಿಹಳ್ಳಿಯಿಂದ ಹಾಸನಕ್ಕೆ ತೆರಳುವ ಹೊರ ವೃತ್ತದ ಅರಳಾಪುರ ಗೇಟ್ ಬಳಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಒಂದು ರಸ್ತೆಯಿದ್ದು , ಅಲ್ಲಿ ವ್ಯಕ್ತಿಯೋರ್ವನನ್ನು ಬರ್ಬರವಾಗಿ ಕೊಲೆ ಮಾಡಿ ಎಸೆಯಲಾಗಿದೆ. ಶವದ ತಲೆಗೆ ಪ್ಲಾಸ್ಟಿಕ್ ಚೀಲ ಸುತ್ತಿದ್ದು , ಕುತ್ತಿಗೆಯ ಬಳಿ ಹರಿತವಾದ ಆಯುಧದಿಂದ ಕೊಯ್ದ ಗುರುತು ಇದೆ. ಕರುಳು ಹೊರ ಬಂದಿದ್ದು, ಕೈ ಕಾಲುಗಳು ಮುರಿದಿವೆ.

ಮೃತ ವ್ಯಕ್ತಿ ತನ್ನ ಎಡಗೈನ ಮೇಲೆ ಸುರೇಶ್ ಎಂದು ಹಚ್ಚೆ ಹಾಕಿಸಿಕೊಂಡಿದ್ದು, ಎಡಗಾಲು ಹೈಬು ಇದ್ದುದರಿಂದ ಈತನನ್ನು ಅವನ ಮನೆಯವರು ಗುರುತಿಸಿದ್ದಾರೆ.

ಶೆಟ್ಟಿಹಳ್ಳಿಯ ಮೂಲ ನಿವಾಸಿಯಾದ ಈತನ ಸಹೋದರರ ಕುಟುಂಬದವರು ಸುಮಾರು ವರ್ಷಗಳ ಹಿಂದೆಯೇ ತಮ್ಮ ತೋಟದ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದರು. ಕುಕ್ಕೆ ಹೆಣೆದು ಜೀವನ ಸಾಗಿಸುತ್ತಿದ್ದ ಪುಟ್ಟಸ್ವಾಮಿಗೆ ಯಾವ ದ್ವೇಷಿಗಳೂ ಇರಲಿಲ್ಲ . ಆದರೆ ಈತ ವಿಚಿತ್ರ ರೀತಿಯಲ್ಲಿ ಕೊಲೆಯಾಗಿರುವುದಕ್ಕೆ ಸುತ್ತಮುತ್ತಲ ಗ್ರಾಮಸ್ಥರು ಭಯಭೀತರಾಗಿದ್ದಾರೆ.

ಈತನಿಗೆ ಒಬ್ಬ ಗಂಡು ಮಗ ಹಾಗೂ ಒಬ್ಬಳು ಹೆಣ್ಣು ಮಗಳಿದ್ದಾಳೆ. ಬೆಲೆ ಬಾಳುವ ಆಸ್ತಿ ಕೂಡ ಇದ್ದು , ಆಸ್ತಿಯ ವಿಚಾರವಾಗಿ ಕೊಲೆಯಾಗಿರಬಹುದು. ಇಲ್ಲವೇ ತೃತೀಯ ಲಿಂಗಿಗಳು ಈ ರೀತಿ ಕೊಲೆ ಮಾಡಿರಬಹುದು ಎಂಬ ಶಂಕೆಯಲ್ಲಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ದತ್ತ ಮಾಲಾಧಾರಿಗಳ ವಾಹನಕ್ಕೆ ಕಲ್ಲು ತೂರಾಟ : 7 ಜನರ ಬಂಧನ

ದತ್ತ ಮಾಲಾಧಾರಿಗಳ ವಾಹನಕ್ಕೆ ಅರೇಹಳ್ಳಿಯಲ್ಲಿ ಕಿಡಿಗೇಡಿಗಳು ಕಲ್ಲು ತೂರಿರುವುದು.

ಬೇಲೂರು : ದತ್ತ ಮಾಲಾಧಾರಿಗಳ ವಾಹನಕ್ಕೆ ಅರೇಹಳ್ಳಿಯಲ್ಲಿ ಕಿಡಿಗೇಡಿಗಳು ಕಲ್ಲು ತೂರಿದ ಪ್ರಕರಣಕ್ಕೆ ಸಂಬಂಧಿಸಿದಂತೆ 7 ಜನರ ವಿರುದ್ಧ ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಸೋಮವಾರ ಮೊಕದ್ದಮೆ ದಾಖಲಿಸಲಾಗಿದೆ.

ದತ್ತ ಜಯಂತಿ ಅಂಗವಾಗಿ ಚಿಕ್ಕಮಗಳೂರಿನ ದತ್ತಪೀಠಕ್ಕೆ ಹೋಗಿ ಬರುತ್ತಿದ್ದ ತಾಲ್ಲೂಕಿನ ಬಜರಂಗ ದಳದ ಕಾರ್ಯಕರ್ತರ ವಾಹನಕ್ಕೆ ಈ ಆರೋಪಿಗಳು ಅರೇಹಳ್ಳಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಸಮೀಪ ಅವಾಚ್ಯ ಶಬ್ದಗಳಿಂದ ಬೈದು, ಕಲ್ಲುಗಳನ್ನು ತೂರಿ ವಾಹನವನ್ನು ಜಖಂಗೊಳಿಸಿದ್ದರು. ಈ ವೇಳೆ ಬಜರಂಗದಳದ ಕೆಲ ಕಾರ್ಯಕರ್ತರಿಗೆ ಸಣ್ಣಪುಟ್ಟ ಗಾಯಗಳಾಗಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿನ್ ಎಂಬುವವರು ನೀಡಿದ ದೂರಿನನ್ವಯ 7 ಜನರ ವಿರುದ್ಧ ಐಪಿಸಿ 1860 ಕಾಯಿದೆಯಡಿ ಪ್ರಕರಣ ದಾಖಲಿಸಲಾಗಿದೆ.

ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ : 28-3-1993

ಮರಣ : 5-12-2015

ವೈಷ್ಣವ್ ಪಿ. (ವಿಷ್ಣು)

ನೀವು ನಮ್ಮನ್ನಗಲಿ ಇಂದಿಗೆ **ಎರಡು ವರ್ಷ** ಕಳೆದರೂ
ನಿಮ್ಮ ನೆನಪು ಸದಾ ಹಚ್ಚಹಸಿರಾಗಿದೆ. ನಿಮ್ಮ ದೇಹದಾನ
ಮಾಡಿ ವೈದ್ಯಕೀಯ ವಿಜ್ಞಾನ ವಿದ್ಯಾರ್ಥಿಗಳ ಕಲಿಕೆಗೆ
ಮಾಧ್ಯಮವಾಗಿ ದೇವರು ಮೆಚ್ಚುವ ಅನುಕರಣೀಯ
ಕೆಲಸ ಮಾಡಿದ ನಿಮ್ಮ ಸ್ಮರಣೆಯಲ್ಲಿರುವ,

ಅಪ್ಪ: ಧರ್ಮಪ್ರಸಾದ್, ಅಮ್ಮ : ನೇತ್ರಾವತಿ
ಅಜ್ಜಿ - ತಾತ, ಚಿಕ್ಕಮ್ಮ - ಚಿಕ್ಕಪ್ಪ, ಅಕ್ಕ-ತಂಗಿಯರು
ಅಣ್ಣ - ತಮ್ಮಂದಿರು, ಬಂಧು - ಮಿತ್ರರು
ತಿರುಮಲ ಕಲ್ಯಾಣ ಮಂಟಪ ಬಳಗ
ಸಾಲಗಾಮೆ ರಸ್ತೆ, ಹಾಸನ.

ಪ್ರತಾಪ್ ಸಿಂಹ ಬಂಧನ ವಿರೋಧಿಸಿ ನಗರದಲ್ಲಿ ಪ್ರತಿಭಟನೆ

ಹಾಸನ : ಹನುಮ ಜಯಂತಿ ನಡೆಸುತ್ತಿರುವುದನ್ನು ವಿರೋಧಿಸಿ ಸಂಸದ ಪ್ರತಾಪ್ ಸಿಂಹ ಅವರನ್ನು ಬಂಧಿಸಿರುವ ಕ್ರಮವನ್ನು ಖಂಡಿಸಿ ನಗರದಲ್ಲಿ ಸೋಮವಾರ ಜಿಲ್ಲಾ ಬಿಜೆಪಿಯಿಂದ ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಹುಣಸೂರಿನಲ್ಲಿ ಹನುಮ ಜಯಂತಿಗೆ ಅನುಮತಿ ನಿರಾಕರಿಸಿ ದತ್ತ ಮಾಲಾಧಾರಿಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸುವ ಮೂಲಕ ದೌರ್ಜನ್ಯ ನಡೆಸಿದ್ದಾರೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಬಿಜೆಪಿ ಕಾರ್ಯಕರ್ತರು, ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ ಸಮಾಜಘಾತುಕ ಶಕ್ತಿಗಳ ಮೇಲೆ ಮೃದು ಧೋರಣೆ ತಾಳಿದೆ. ಹಿಂದೂ ಸಂಘಟನೆ ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆಸುತ್ತಿದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳನ್ನು ಗಮನಿಸಿದರೆ ರಾಜ್ಯ ಸರ್ಕಾರ ತನ್ನ ಮತ ಬ್ಯಾಂಕುಗಳನ್ನು ಗಟ್ಟಿಗೊಳಿಸಿಕೊಳ್ಳುವ ಏಕೈಕ ಉದ್ದೇಶದಿಂದ ಹಿಂದೂ ಸಂಘಟನೆಗಳನ್ನು ಹತ್ತಿಕ್ಕಲು ಹುನ್ನಾರ ನಡೆಸಿದೆ. ಸಮಾಜ ಬಾಹಿರ ಶಕ್ತಿಗಳ ಮೇಲೆ ಮೃದು ಧೋರಣೆ ತಾಳಿರುವ ರಾಜ್ಯ ಸರಕಾರ ಹಿಂದೂ ವಿರೋಧಿ ಧೋರಣೆ ಅನುಸರಿಸುತ್ತಿದೆ . ಇದಕ್ಕೆ ಹುಣಸೂರಿನಲ್ಲಿ ಪ್ರತಾಪ್ ಸಿಂಹ ಅವರನ್ನು ಬಂಧಿಸಿರುವ ಪ್ರಕರಣವೇ ಸಾಕ್ಷಿ ಎಂದರು.

ಇಂದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ರಾಜ್ಯ ಸರ್ಕಾರ ಸ್ವ ಹಿತಾಸಕ್ತಿ ಕಾಪಾಡಿಕೊಳ್ಳಲು ಮುಂದಾಗಿದೆ. ಆದ್ದರಿಂದ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ರಾಜ್ಯದಲ್ಲಿ ಶಾಂತಿ ಸೌಹಾರ್ದತೆಯನ್ನು ಕಾಪಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಬಿ.ಜೆ.ಪಿ ಅಧ್ಯಕ್ಷ ಯೋಗಾ ರಮೇಶ್, ಪ್ರೀತಮ್ ಜೆ.ಗೌಡ, ಗ್ರಾಮಾಂತರ ಅಧ್ಯಕ್ಷ ಅಗಿಲೆ ಯೋಗೀಶ್, ನವಿಲೆ ಅಣ್ಣಪ್ಪ , ಯುವ ಮೋರ್ಚಾ ಜಿಲ್ಲಾಧ್ಯಕ್ಷ ಹೆಚ್.ಎನ್. ನಾಗೇಶ್, ಮಾಜಿ ಅಧ್ಯಕ್ಷ ಚನ್ನಕೇಶವ, ಹುಲ್ಲಳ್ಳಿ ಸುರೇಶ್, ಪ್ರಭು, ವೇಣು ಗೋಪಾಲ್, ಸುಶೀಲ ಅಣ್ಣಪ್ಪ , ವಿಜಯ ಲಕ್ಷ್ಮೀ ಇನ್ನಿತರರು ಪಾಲ್ಗೊಂಡಿದ್ದರು.

BASE Academy of Spoken English & Personality Development

Opp. Govt. Science College, Saraswathi Puram, 2nd main,
(Opp. Electrical Transformer), Behind Internet Parlours, Salagame Road, Hassan

ಇಂಜಿನಿಯರಿಂಗ್, ಡಿಪ್ಲೊಮಾ, ಬಿ.ಎಡ್., ಎಲ್‌ಎಲ್.ಬಿ. ,ಎಂ.ಎ., ಎಂ.ಕಾಂ., ಮುಂತಾದ ವೃತ್ತಿಪರ / ಸಾಮಾನ್ಯ ಇತ್ಯಾದಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಪ್ರವೇಶ ಬಯಸುವ ವಿದ್ಯಾರ್ಥಿಗಳು ಅವರ ಇಂಗ್ಲೀಷ್ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಭವಿಷ್ಯದಲ್ಲಿ ಗೆಲುವು ಸಾಧಿಸಲು ಹಾಗೂ ಕ್ಯಾಂಪಸ್ ಆಯ್ಕೆ ಬಯಸುವ ಮತ್ತು ದೇಶ-ವಿದೇಶಗಳಲ್ಲಿ ಉನ್ನತ ಹುದ್ದೆ ಗಳಿಸಲು ಬಯಸುವ ವಿದ್ಯಾರ್ಥಿಗಳಿಗಾಗಿ,

ಉದ್ಯೋಗಸ್ಥರು, ಉದ್ಯೋಗ ಬಯಸುವವರು, ಗೃಹಿಣಿಯರು, ಮುಂತಾದವರಿಗಾಗಿ 2 ಮತ್ತು 4 ತಿಂಗಳ ಅವಧಿಯ ಸ್ಪೋಕನ್ ಇಂಗ್ಲೀಷ್ ತರಬೇತಿಯ ಹೊಸ ಬ್ಯಾಚ್‌ಗಳು 4-12-2017ರಿಂದ ಪ್ರಾರಂಭವಾಗಿದೆ.

ಆಸಕ್ತರು ಕೂಡಲೇ ಖುದ್ದು ಸಂಪರ್ಕಿಸಿ ಪ್ರವೇಶ ಪಡೆಯಿರಿ.

ಶ್ರೀಮತಿ ಕೃಪಾ ವೆಂಕಟೇಶ್

ಎಂ.ಎ. (ಇಂಗ್ಲೀಷ್), ಎಂ.ಎ. (ಜರ್ನಲಿಸಂ), ಬಿ.ಎಡ್., ಪಿ.ಜಿ.ಡಿ.ಎಂ.ಸಿ.ಜೆ.,
ಪಿ.ಜಿ.ಡಿ. ಇನ್ ಕಮ್ಯುನಿಕೇಟಿವ್ ಇಂಗ್ಲೀಷ್
ನಿರ್ದೇಶಕರು / ಉಪನ್ಯಾಸಕರು
94483 92721, 90089 33049